

ಬೇವು ಬೆಲ್ಲ ಸಂಭ್ರಮ

# ಇಸ್ಪೀಟ್ ಆಟ, ಬಾಡೂಟ

**ಮೈಸೂರು ಸೀಮೆಯಲ್ಲಿ ಯುಗಾದಿ ಹಬ್ಬಕ್ಕೆ ಬೇವು–ಬೆಲ್ಲದ ಸವಿ ಮಾತ್ರವಲ್ಲ, ಊರುಗಳ ಬೀದಿಬೀದಿಗಳಲ್ಲಿ ಇಸ್ಪೀಟಿನ ಆಟವೂ ಜೋರು. ಬಾಡೂಟದ ಘಮವೂ ಈ ಹಬ್ಬದ ಕಳೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ.**

■ ಎಂ. ಮಹೇಶ್
ಕಲೆ: ಸಂತೋಷ್ ಸಸಿಹಿತ್ಲು

ನಮ್ಮ ಕರುನಾಡು ವೈವಿಧ್ಯಮಯ ಸಂಸ್ಕೃತಿಗಳ ಬೀಡು. ಪ್ರತಿ ಹಬ್ಬಕ್ಕೂ ಮಹತ್ವವನ್ನು ಹೊಂದಿರುವ ನೆಲೆವೀಡು. ಪ್ರತಿ ಜಿಲ್ಲೆಯಲ್ಲೂ, ಪ್ರದೇಶದಲ್ಲೂ ವೈವಿಧ್ಯಮಯ ಆಚರಣೆಗಳು ಪ್ರತಿ ಹಬ್ಬದಲ್ಲೂ ಕಾಣಸಿಗುತ್ತವೆ. ಅಂತೆಯೇ, ಯುಗಾದಿಯನ್ನು ಮೈಸೂರು ಸೀಮೆಯಲ್ಲಿ ಬೇವು–ಬೆಲ್ಲವನ್ನು ಸವಿಯುವ ಜೊತೆಗೆ ಮತ್ತಷ್ಟು ವಿಶೇಷವಾಗಿ ಆಚರಿಸುವ ಸಂಪ್ರದಾಯವಿದೆ. ಇಸ್ಪೀಟ್ ಜೂಜಾಟ..., ವರ್ಷತೊಡಕು (ಹೊಸತೊಡಕು ಎನ್ನುವುದೂ ಪ್ರಚಲಿತ) ಅಂಗವಾಗಿ ಗುಡ್ಡೆಮಾಂಸದ ಬಾಡೂಟದೊಂದಿಗೆ ಈ ಹಬ್ಬ ಕಳೆಗಟ್ಟುತ್ತದೆ.

ಈ ಹಬ್ಬದ ಕೆಲವು ದಿನಗಳ ಮುನ್ನವೇ ಜೂಜಾಟ ರಂಗು ಪಡೆಯುತ್ತದೆ. ಊರುಗಳ ಹೊರವಲಯಗಳಲ್ಲೋ... ಕೆಲವೆಡೆ ಊರಿನ ಮಧ್ಯದ ಗುಡಿಯ ಪಕ್ಕದಲ್ಲೋ... ರಾಮಮಂದಿರದ ಜಗುಲಿಯಲ್ಲೋ... ಯಾರದ್ದಾದರೂ ತೊಟ್ಟಿ ಮನೆಯ ವರಾಂಡದಲ್ಲೋ... ಜಮೀನುಗಳ ಸಮೀಪದ ಹೊಂಗೆ, ಅರಳಿ ಮರದ ನೆರಳಲ್ಲೋ... ಅರಳಿಕಟ್ಟೆಯಲ್ಲೋ... ಆಲೆಮನೆಯಲ್ಲೋ... ಪಾಳುಬಿದ್ದು ಗುಡಿಯಲ್ಲೋ... ಕುಟುಂಬದವರ ಹಾಗೂ ಪೊಲೀಸರ ಕಣ್ತಪ್ಪಿಸಲು ಅಜ್ಞಾತ ಸ್ಥಳದಲ್ಲೋ... ಅಂಗಡಿಗಳ ಮುಂದೆಯೋ... ಶಾಲೆಯ ಆವರಣದಲ್ಲೋ... ಮಾವಿನ ತೋಪಿನಲ್ಲೋ... ತೆಂಗಿನ ತೋಟದಲ್ಲೋ... ಇಟ್ಟಿಗೆ ತಯಾರಿಕೆ ಘಟಕದ ಜಾಗದಲ್ಲೋ... ಪಂಪ್‌ಸೆಟ್ ಮನೆಯಲ್ಲೋ... ಇಸ್ಪೀಟ್ ಜೂಜಾಟ ನಡೆಯುತ್ತದೆ.

